# The RURAL MIRROR

18-07-2024

NEWSLETTER


## ಭಾರೀ ಮಳೆ | ಕರಾವಳಿ ಜಿಲ್ಲೆಯ ಶಾಲೆಗಳಿಗೆ ರಜೆ

ಕರಾವಳಿ-ಮಲೆನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದೆ. ಹವಾಮಾನ ಇಲಾಖೆಯು ಮತ್ತೆ ಎರಡು ದಿನ ರೆಡ್ ಎಲರ್ಟ್ ಘೋಷಣೆ ಮಾಡಿದೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಜು.19 ರಂದು ಉಡುಪಿ, ಕೊಡಗು ಹಾಗೂ ದ ಕ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಶಾಲೆಗೆ ರಜೆ ಘೋಷಣೆ ಮಾಡಲಾಗಿದೆ.

## ಸಂಪಾಜೆ-ಮಡಿಕೇರಿ ಹೆದ್ದಾರಿ ಸಂಚಾರ ಬಂದ್

ಸಂಪಾಜೆ-ಮಡಿಕೇರಿ ರಸ್ತೆಯಲ್ಲಿ ಇಂದು ರಾತ್ರಿಯಿಂದಲೇ ಎಲ್ಲಾ ರೀತಿಯ ವಾಹನಗಳ ಸಂಚಾರವು ರಾತ್ರಿ 8 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ನಿಷೇಧಿಸಲಾಗಿದೆ. ಹಗಲು ಮಾತ್ರಾ ವಾಹನ ಸಂಚಾರ ವ್ಯವಸ್ಥೆ ಮಾಡಲಾಗಿದೆ. ಸಂಪಾಜೆಯ ಕರ್ತೋಜಿ ಎಂಬಲ್ಲಿಯೂ ಕುಸಿತದ ಭೀತಿ ಇದೆ.

## ಶಿರಾಡಿ ಘಾಟ್‌ನಲ್ಲಿ ಗುಡ್ಡ ಕುಸಿತ, ಸಂಚಾರ ಬಂದ್

ಶಿರಾಡಿ ಘಾಟಿಯಲ್ಲಿ ಗುಡ್ಡ ಕುಸಿತವಾಗಿದೆ. ಹೀಗಾಗಿ ರಸ್ತೆಯಲ್ಲಿ ತುರ್ತು ಕಾಮಗಾರಿಗಳು ನಡೆಯಬೇಕಿರುವುದರಿಂದ ಶುಕ್ರವಾರದಿಂದ ಕಾಮಗಾರಿ ಮುಗಿಯುವವರೆಗೆ ಎಲ್ಲಾ ರೀತಿಯ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗುತ್ತಿದೆ. ಈ ಬಗ್ಗೆ ಹಾಸನ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದ್ದಾರೆ.



# ಪುತ್ತೂರಲ್ಲಿ ತಳಿ ಸಂರಕ್ಷಣೆಯ "ಸಮೃದ್ಧ" ಕಾರ್ಯಕ್ರಮ

ಅತ್ಯಂತ ಉತ್ಕೃಷ್ಟ ಜಾತಿಯ ಕಾಡು ಮಾವಿನ ಮರ ಗಾಳಿಗೆ ಬಿದ್ದಿತು. ತಕ್ಷಣವೇ ಜಾಗೃತವಾದ ಸಂಘವೊಂದು, ತಂಡವೊಂದು ಗಿಡವನ್ನು ಉಳಿಸುವ ಪ್ರಯತ್ನ ಮಾಡಿದರು. ನೂರಕ್ಕೂ ಹೆಚ್ಚು ಮನೆಗಳಿಗೆ ಕಸಿ ಗಿಡವಾಗಿ ತಲಪಿಸುವ ಕೆಲಸ ನಡೆಯಿತು.ಇಂತಹದ್ದೊಂದು "ಸಮೃದ್ಧ" ಕೆಲಸ ನಡೆದದ್ದು ಪುತ್ತೂರಿನಲ್ಲಿ. ..

ಪುತ್ತೂರಿನಲ್ಲಿ ಸಮೃದ್ಧಿ ಗಿಡಗೆಳತನ ಸಂಘ ಇದೆ. ಕಳೆದ ಹಲವು ವರ್ಷಗಳಿಂದ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಪ್ರತೀ ತಿಂಗಳು ಕೃಷಿ ಸಂಬಂಧಿತ ಸಭೆ, ಪ್ರವಾಸವನ್ನು ಹಮ್ಮಿಕೊಳ್ಳುತ್ತಿದೆ. ನಿಗದಿಯಾದಂತೆ ಬುಧವಾರದಂದು ಕಸಿ ಕಟ್ಟುವ ಬಗ್ಗೆ ತರಬೇತಿ ಹಾಗೂ ತರಕಾರಿ ಕೃಷಿಯ ಬಗ್ಗೆ ಸಭೆ ಆಯೋಜನೆಯಾಗಿತ್ತು. ಕೃಷಿಕ, ನಿವೃತ್ತ ವಿಜ್ಞಾನಿ ಡಾ.ಯದುಕುಮಾರ್ ಅವರ ನರ್ಸರಿಯಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿತ್ತು. 1993 ರಲ್ಲಿ ಆರಂಭಗೊಂಡ ಸಮೃದ್ಧಿ ಗಿಡಗೆಳೆತನ ಸಂಘವನ್ನು ಹಲವಾರು ಪ್ರಮುಖರು ಮುನ್ನಡೆಸಿದ್ದರು, ಕೃಷಿ, ತರಕಾರಿ ಬೀಜಗಳ ವಿನಿಮಯ, ವಿನೂತನ ಕೃಷಿಯ ಪರಿಚಯ ಹೀಗೇ ಸಂಘವು ಬೆಳೆದಿದೆ. ಈಗಲೂ ಅದೇ ಕಾರ್ಯವನ್ನು ಮುನ್ನಡೆಸಲಾಗುತ್ತಿದೆ.

ಪುತ್ತೂರಿನಲ್ಲಿ ಬುಧವಾರ ಕಾರ್ಯಕ್ರಮ ನಿಗದಿಯಾದ ಬಳಿಕ ಸೇಡಿಯಾಪು ಕೃಷಿಕ ಹೃಷಿಕೇಶ ಎಂಬವರ ಮನೆಯಲ್ಲಿದ್ದ ಸುಮಾರು 100 ವರ್ಷ ಹಳೆಯ ಮಾವಿನ ಮರವೊಂದು ಗಾಳಿಗೆ ಉರುಳಿ ಬಿತ್ತು. ಈ ಮರವು ಉತ್ಕೃಷ್ಟ ಜಾತಿಯದ್ದಾಗಿದ್ದು ಅಪ್ಪೆ ಮಿಡಿಯ ಮಾದರಿಯದ್ದಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ನಾಮಾಮಿ ಬಳಗದ ಜಯರಾಮ ಮುಂಡೋಳಿಮೂಲೆ ಹಾಗೂ ಅವರ ತಂಡವು ಕೃಷಿಕರ ಮನೆಗೆ ತೆರಳಿ ಕಸಿ ಮಾಡಿ ಗಿಡ ಉಳಿಸಲು ಸಯಾನ್ ತೆಗೆಯುವ ಕಾರ್ಯ ಮಾಡಿತು. ಇದನ್ನು ಕಸಿ ಮಾಡಿ ಕಾರ್ಯಕ್ರಮಕ್ಕೆ ಆಗಮಿಸಿದವರಿಗೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಸುಮಾರು 120 ಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ಕಸಿ ಕಟ್ಟಿ ನೀಡಿರುವ ಗಿಡದಲ್ಲಿ ಕನಿಷ್ಟ 60 ಗಿಡವಾದರೂ ಉಳಿಯಬಹುದಾಗಿದೆ. ಈ ಮೂಲಕ ಒಂದು ಗಿಡದ ರಕ್ಷಣೆ, ತಳಿ ರಕ್ಷಣೆಯನ್ನು ಸಮೃದ್ಧಿಯ ಮೂಲಕ ನಾಮಾಮಿ ತಂಡವೂ ಮಾಡಿದೆ. ಸಮೃದ್ಧಿ ಗಿಡಗೆಳೆತನ ಸಂಘವು ಇಷ್ಟೂ ವರ್ಷಗಳಿಂದ ಇದೇ ಮಾದರಿಯ ಕೆಲಸಗಳನ್ನು ಮಾಡಿದೆ.


ಹೆಚ್ಚಿನ ಮಾಹಿತಿಗೆ ಕ್ಲಿಕ್ ಮಾಡಿ www.theruralmirror.com


## ಮುಂದುವರಿದ ಮಳೆ ಇನ್ನೂ ಎರಡು ದಿನ “ಎಲರ್ಟ್”

ಕರಾವಳಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದೆ. ಹವಾಮಾನ ಇಲಾಖೆಯು ಮತ್ತೆ ಎರಡು ದಿನ ರೆಡ್ ಎಲರ್ಟ್ ಘೋಷಣೆ ಮಾಡಿದೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಜು.19 ರಂದು ಉಡುಪಿ, ಕೊಡಗು ದ ಕ ಜಿಲ್ಲೆಗಳಲ್ಲಿ ಶಾಲೆಗೆ ರಜೆ ಘೋಷಣೆ ಮಾಡಲಾಗಿದೆ.
ಮಳೆಯ ಅಬ್ಬರವು ಮಲೆನಾಡು-ಕರಾವಳಿ ಭಾಗದಲ್ಲಿ ಜೋರಾಗಿತ್ತು.ಗುರುವಾರ ಸುರಿದ ಭಾರಿ ಮಳೆಗೆ ಶಿಶಿಲ ಗ್ರಾಮದ ಶ್ರೀ ಶಿಶಿಲೇಶ್ವರ ದೇವಸ್ಥಾನದ ಅಂಗಣಕ್ಕೆ ನೀರು ಹರಿದು ಬಂದಿದೆ.


Read More .........
www.theruralmirror.com


## “ನನ್ನಿಂದಾಗೋಲ್ಲ" ಎನ್ನದೇ ಇರುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಿ

ಓದಿ ಕಲಿಯುವ ಕುತೂಹಲದ ಗುಣ ಮಕ್ಕಳಲ್ಲಿ ಬೆಳೆಯಬೇಕು. knowledge ಎಂಬ power pack ಗೆ ಓದುವಿಕೆಯೇ recharger. ಮಕ್ಕಳು ಓದಬೇಕಾದರೆ ಹಿರಿಯರೂ ಓದಬೇಕು. ತಾವು ಓದಿದ್ದನ್ನು ಮಕ್ಕಳೊಂದಿಗೆ ಹಂಚಿಕೊಳ್ಳಬೇಕು. ಮಕ್ಕಳು ಓದಿ ವಿವರಿಸುವುದನ್ನು ಕೇಳಲು ಹೆತ್ತವರು ಕಿವಿಯಾಗಬೇಕು ಮತ್ತು ಚರ್ಚಿಸಲು ಸಮಯ ನೀಡಬೇಕು. ......


Read More .........
www.theruralmirror.com